ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 17-03-2021 ಪ್ರಶ್ನೆ ಸಂಖ್ಯೆ : 1231 (1440)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 17-03-2021

ಉತ್ತರಿಸುವ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ವಿಷಯ : ಮೀನುಗಾರ ಕುಟುಂಬಗಳಿಗೆ ಮನೆ ಹಂಚಿಕೆ ಬಗ್ಗೆ

(ಅ) 2018 ಮತ್ತು 19 ನೇ ಸಾಲಿನಿಂದ ಇಲ್ಲಿಯವರೆಗೂ ರಾಜ್ಯದ ಮೀನುಗಾರರಿಗೆ ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಲಾಗಿರುವ ಮನೆಗಳ ಸಂಖ್ಯೆ ಎಷ್ಟು ; ಮಾಡಿದ್ದಲ್ಲಿ, ವಿವರಿಸುವುದು; ಇಲ್ಲವಾದಲ್ಲಿ, ಇದಕ್ಕೆ ಕಾರಣಗಳೇನು ಹಾಗೂ ಈ ಮನೆಗಳಿಗೆ ಬಿಡುಗಡೆಯಾದ ಮೊತ್ತವೆಷ್ಟು ; ಖರ್ಚು ಎಷ್ಟು; ಬಾಕಿ ಮೊತ್ತವೆಷ್ಟು ; (ವಿವರ ನೀಡುವುದು)

(ಆ) 2019 ನೇ ಸಾಲಿನಲ್ಲಿ ಎನ್.ಎಫ್.ಡಿ.ಬಿ. ಯೋಜನೆಯಡಿ ಬಿಡುಗಡೆಯಾದ ಕೇಂದ್ರ ಹಾಗೂ ರಾಜ್ಯದ ಮೊತ್ತ ಎಷ್ಟು ; ಅದರಲ್ಲಿ ಖರ್ಚಾದ ಹಾಗೂ ಬಾಕಿ ಉಳಿದ ಮೊತ್ತದ ವಿವರ ನೀಡುವುದು ;

(ಇ) 2018, 2019 ಮತ್ತು 2020 ನೇ ಸಾಲಿನಲ್ಲಿ ಏತ ನೀರಾವರಿ ಯೋಜನೆಯಡಿ ಬರುವ ಕೆರೆಗಳನ್ನು ಮೀನುಗಾರಿಕೆಗಾಗಿ ವಿಲೇವಾರಿ ಮಾಡಲಾಗಿದೆಯೇ ; (ತಾಲ್ಲೂಕುವಾರು, ಫಲಾನುಭವಿಯ ಸಂಸ್ಥೆಯ ಹೆಸರು ಮತ್ತು ಮೊತ್ತದ ಮಾಹಿತಿ ನೀಡುವುದು)

(ಈ) 2019 ಮತ್ತು 2020 ನೇ ಸಾಲಿನಲ್ಲಿ ರಾಜ್ಯ ಹಾಗೂ ಕೇಂದ್ರದಿಂದ ಯಾವ ಯಾವ ಯೋಜನೆಯಡಿ ಬಿಡುಗಡೆಯಾದ ಮೊತ್ತ ಎಷ್ಟು ; ಖರ್ಚು ಎಷ್ಟು ; ಬಾಕಿ ಮೊತ್ತ ಎಷ್ಟು ? (ಖರ್ಚು ಮಾಡಿದ್ದಲ್ಲಿ, ಯೋಜನೆವಾರು/ಫಲಾನುಭವಿಗಳ ಮಾಹಿತಿ ನೀಡುವುದು)